(ಶ್ರೀ ಕಡಿದಾಳ್ ಮಂಜಪ್ಪ.)

ಆ ಕೆಲಸಗಳನ್ನು ಬೇಗ ಪ್ರಾರಂಭಿಸುವಂತೆ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ.

ಶ್ರೀ ಶಿವನಂಜೇ ಗೌಡ.—ಹಾಗಾದರೆ ಅವರು ಕೆಲಸವನ್ನು ಇನ್ನೂ ಪ್ರಾರಂಭಿಸದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಶಿವನಂಜೇ ಗೌಡ.—ತಾವು ನನ್ನ (ಬ) ಪ್ರಶ್ನೆಗೆ ಉತ್ತರದಲ್ಲಿ ಇದು ಉದ್ಭವಿಸುವುದಿಲ್ಲವೆಂದು ಹೇಳಿದ್ದೀರಿ. ಹಾಗೆ ಹೇಳಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಕೇಳಿತಕ್ಕ ಪ್ರಶ್ನೆಯಲ್ಲಿ ಭೇಟಿಕೊಡದಿರಲು ಕಾರಣವೇನೆಂದು ಕೇಳಿದ್ದೀರಿ. ಆ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ. ಅದಕ್ಕೆ ಹಾಗೆ ಉತ್ತರ ಕೊಡಲಾಗಿದೆ.

ಶ್ರೀ ಶಿವನಂಜೇ ಗೌಡ.—ಮೈಸೂರು ಜಿಲ್ಲೆಯು ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರುವ ಕಾರಣ ತಾವು ಅಲ್ಲಿನ ಗ್ರಾಮಗಳಿಗೆ ಹೆಚ್ಚಿಗೆ ಭೇಟಿಕೊಟ್ಟು ನೋಡಿ ಅವುಗಳ ಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಅವರು ಆಗ್ಗೆ ತಮ್ಮಲ್ಲಿ ಕೇಳಿಕೊಳ್ಳಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಪ್ರತಿಯೊಂದು ಗ್ರಾಮಕ್ಕೂ ಭೇಟಿಕೊಟ್ಟು ನೋಡಿ ಅವುಗಳ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅಂಥ ಆವಶ್ಯಕತೆಯಿದೆಯೆಂದು ಕಂಡು ಬರುವಂಥ ಗ್ರಾಮಗಳಿಗೆ ಮಾತ್ರ ಹೋಗಿಬರಬಹುದು.

ಶ್ರೀ ಶಿವನಂಜೇ ಗೌಡ.—ಆಗ್ಗೆ ಅಲ್ಲಿನ ಇತರ ಕೆಲವು ಗ್ರಾಮಗಳವರು ಕೇಳಿಕೊಂಡಾಗ ತಾವು ಆ ಗ್ರಾಮಗಳಿಗೆ ಅಜಮಾಯಿಷಿಗಾಗಿ ಭೆಟ್ಟಿಕೊಡುತ್ತೇವೆಂದು ಹೇಳಿದ್ದಿರಲ್ಲಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಯೊಂದು ಕಡೆಯಲ್ಲೂ ಅವರ ಸ್ಥಳಕ್ಕೆ ಬರಬೇಕೆಂದು ಜನರು ಕೋರುತ್ತಾರೆ. ಆದರೆ ಅಂಥ ಆವಶ್ಯಕತೆ ಎಲ್ಲೆಲ್ಲದೆಯೆಂದು ಕಂಡುಬರುತ್ತದೋ ಅಂಥ ಸ್ಥಳಗಳಿಗೆ ಮಾತ್ರ ಭೇಟಿ ಕೊಡಲು ಸಿದ್ಧವಾಗಿದ್ದೇವೆ ವಿನಾ ಕರೆದ ಕಡೆಗಳಿಗೆಲ್ಲಾ ಹೊಗಲು ಆಗುವುದಿಲ್ಲ.

ಶ್ರೀ ಎಂ. ಪಳನಿಯಪ್ಪನ್.—ಅಲನೂರು ಕಾರ್ಖಿಟ್ಯುರೆಸಿಗೆ ಯಾವಯಾವ ಮಂತ್ರಿಗಳು ಎಷ್ಟೆಷ್ಟು ಸಾರ್ತಿ ಭೇಟಿ ಕೊಟ್ಟಿದ್ದೀರಿ ?

(ಉತ್ತರವಿಲ್ಲ)

Sri M. LINGANNA.—May I know whether the Government are aware that this particular Taluk has not got even a single road which is maintained well ?

Sri KADIDAL MANJAPPA.—I am aware that there are some good roads in that Taluk.

Sri M. LINGANNA.—May I know the roads in this Taluk which are maintained by Public Works and the District Board ?

Sri KADIDAL MANJAPPA.—Notice.

Cement-concreting of Nanjangud-Gundlupet Road.

Q.—333. Sri H. K. SHIVARUDRAPPA (Gundlupet-Heggaddevankote).—

Will the Government be pleased to state :—

(*a*) whether it is a fact that Nanjangud-Gundlupet Road is being cement-concreted ;

(*b*) the amount that has been allotted for 1953-54 for cement-concreting this road ;

(*c*) the particular miles between which this road is in such a bad condition as to make it difficult for vehicular traffic ;

(*d*) the miles between which the road has been tarred and the condition thereof ;

(*e*) the length and breadth of the road that will be concreted during this year ;

(*f*) the miles between which the road will be concreted this year ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) There is no allotment specifically for this work. But a sum of Rs. 3,00,000 has been asked for.

(*c*) Miles 110 to 114.

(*d*) Miles 98 to 102. The tarred surface is fast wearing off.

(*e*) Length : 5 miles. Width of concreted surface is proposed to be 12 feet.

(*f*) Miles 98 to 102.

ಶ್ರೀ ಎಚ್. ಕೆ. ಶಿವರುದ್ರಪ್ಪ.—(ಬ) ಪ್ರಶ್ನೆಗೆ ಉತ್ತರವಾಗಿ, ಹಣವನ್ನೊದಗಿಸಿಲ್ಲ ಎಂದು ಹೇಳಿದ್ದೀರಿ. ಅಂದಮೇಲೆ ಈ ವರ್ಷ ಆ ಕೆಲಸವನ್ನು ಕೈಕೊಳ್ಳುವುದಿಲ್ಲವೆಂದು ಹೇಳುತ್ತೀರೇನು ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಅದಕ್ಕೆ ರಿಅಪ್ರೋಪ್ರಿಯೇಷನ್ನಿನಿಂದಲೋ ಅಥವಾ ಸ್ಪೆಷಲ್ ಗ್ರಾಂಟಿನಿಂದರೋ ಮೊಬಲಗನ್ನು ಒದಗಿಸಬೇಕೆಂದು ಉದ್ದೇಶಿಸಲಾಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು (ಎಫ್) ಪ್ರಶ್ನೆಗೆ ಉತ್ತರವಾಗಿ 98ನೆಯ ಮೈಲಿ ಕಲ್ಲಿನಿಂದ 102ನೆಯ ಮೈಲಿ ಕಲ್ಲಿನ ವರೆಗೆ ಕಾಂಕ್ರೀಟ್ ಹಾಕಲಾಗುತ್ತಿದೆಯೆಂದು ತಿಳಿಸಿದ್ದೀರಿ. (ಸಿ) ಪ್ರಶ್ನೆಗೆ ಉತ್ತರವಾಗಿ ವಾಹನ ಸಂಚಾರಕ್ಕೆ ಆತಂಕ ಉಂಟು ಮಾಡುವಷ್ಟರ ಮಟ್ಟಿಗೆ ರಸ್ತೆ ತೀರ ಹದಗೆಟ್ಟಿರುವುದು

110ನೆಯ ಮೈಲಿ ಕಲ್ಲಿನಿಂದ 114ನೆಯ ಮೈಲಿ ಕಲ್ಲಿನ ವರೆಗೆಂದು ತಿಳಿಸಿದ್ದೀರಿ. ಇಧರ ಅರ್ಥವೇನು ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ಕೆಟ್ಟು ಹೋಗಿರುವು ದನ್ನೆಲ್ಲಾ ಮಾಡಿಸಲು ಸಾಧ್ಯವಿಲ್ಲ. Cement-concreting is done on a planned basis. We cannot take up all roads that are bad.

ಶ್ರೀ ಎಚ್. ಕೆ. ಶಿವರುದ್ರಪ್ಪ.—110ನೆಯ ಕಲ್ಲಿನಿಂದ 114ನೆಯ ಮೈಲಿ ಕಲ್ಲಿನವರೆಗಾದರೂ ತೆಗೆದು ಕೊಳ್ಳುವುದು ಉತ್ತಮವಲ್ಲವೇ?

Sri KADIDAL MANJAPPA.—We have got a plan according to which we are proceeding.

Purchase of cocoons in Mysore District by Kollegal Silk Filatures.

Q.—315. Sri U. M. MADAPPA (Chamarajanagar).—

Will the Government be pleased to state :—

(*a*) whether it has come to their notice that the Kollegal Silk Filatures of the Government of Madras have been carrying on purchases of cocoons in the several cocoon markets in Mysore District ;

(*b*) whether it is not possible for the Mysore Silk Filatures themselves to purchase the cocoons reared in Mysore State and arrange to reel yarn from them ;

(*c*) the reason why this has not been possible so far ;

(*d*) whether the Mysore Government have not owned some shares of the Mysore Silk Filature Company ;

(*e*) If so, what is the value of those shares ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) and (*c*) The branches of the Mysore Silk Filatures in Mysore District cannot purchase all the cocoons for reeling in their filatures as the basins installed by them are intended to reel about 2 lakhs of pounds of raw silk. Additional Filatures will have to be established in case all the cocoons produced in the Mysore State have to be utilised in Mysore State alone by Filatures.

(*d*) The Mysore Government own 1,500 shares.

(*e*) Value of shares : Rs. 15,000.

ಶ್ರೀ ಯು. ಎಂ. ಮಾದಪ್ಪ.—ಮೈನೂರು ಜಿಲ್ಲೆಯಲ್ಲಿ ಒಟ್ಟು ಎಷ್ಟು ಪೌಂಡು ಕಕೂನ್ ಉತ್ಪತ್ತಿಯಾಗುತ್ತದೆ?

*ಶ್ರೀ ಎಚ್. ಸಿದ್ದವೀರಪ್ಪ.—ಇಡೀ ಸಂಸ್ಥಾನದಲ್ಲಿ 283 ಲಕ್ಷ ಪೌಂಡುಗಳಷ್ಟು ಉತ್ಪತ್ತಿಯಾಗುತ್ತದೆ. ಆದರೆ ಮೈನೂರು ಜಿಲ್ಲೆಯೊಂದರಲ್ಲೇ ನುಮಾರು 200 ಲಕ್ಷ ಪೌಂಡುಗಳಷ್ಟು ಉತ್ಪತ್ತಿಯಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಹೊಸದಾಗಿ ಸಂಸ್ಥಾನದಲ್ಲಿ ಹೆಚ್ಚಿನ ಫಿಲೇಚರ್ ಕೈಗಾರಿಕೆಯನ್ನು ಸ್ಥಾಪಿಸಲಾಗುತ್ತದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇರತಕ್ಕವುಗಳೇ ಪೂರ್ತಿಯಾಗಿ ಎಲ್ಲವೂ ಕೆಲಸಮಾಡುತ್ತಿಲ್ಲ. ಈಗ ಇರುವ ಏಳು ಸೆಂಟರುಗಳಲ್ಲಿ ಮೂರು ಮಾತ್ರ ಹಾಲ ಕೆಲಸ ಮಾಡುತ್ತಿವೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆ ಬಾಕಿಯವು ಗಳು ಕೆಲಸ ಮಾಡದೆಯಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಗಿರಾಕಿ ಇಲ್ಲ. ನಾವು ಎಷ್ಟು ಸಿಲ್ಕನ್ನು ತಯಾರಿಸುತ್ತೇವೋ ಅಷ್ಟೂ ಸಹ ಈಗ ಖರ್ಚಾಗುತ್ತಿಲ್ಲ. Market conditions are no t favourable.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ತಯಾರಾಗತಕ್ಕ ರೇಷ್ಮೆಗೆ ಗಿರಾಕಿ ಇದೆಯೋ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಡಿಮ್ಯಾಂಡ್ ಇದೆ ಯೆಂಬ ಪ್ರಶ್ನೆಯಲ್ಲ. ಅಲ್ಲಿ natural facilities ಜಾಸ್ತಿ ಇವೆ. ಕೊಳ್ಳೇಗಾಲದವರು ಬಂದು ನಮ್ಮಲ್ಲಿರುವ ಗೂಡುಗಳನ್ನು ತೆಗೆದುಕೊಂಡು ಹೋಗಿ ಖರ್ಚು ಮಾಡುತ್ತಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ನಮ್ಮಲ್ಲಿ ಹಾಗೆ ಫೆಸಿಲಿಟೀಸ್‌ಗಳು ಕಮ್ಮಿಯಾಗಿರುವುದಕ್ಕೂ ಮತ್ತು ಆ ಕೊಳ್ಳೇಗಾಲದಲ್ಲಿ ಈ ಸೌಲಭ್ಯಗಳು ಜಾಸ್ತಿಯಾಗಿರುವುದಕ್ಕೂ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಮ್ಮಲ್ಲಿ ವಾಸ್ತವವಾಗಿ ಎಷ್ಟು ಬೇಸಿನ್‌ಗಳಿರುತ್ತವೆಯೋ ಅಷ್ಟೂ ಕೆಲಸ ಮಾಡಲು ಸಾಧ್ಯವಾಗಿಲ್ಲ. ಆದುದರಿಂದ ಈ ಸಿಲ್ಕನ್ನು ತಯಾರಿಸಿ ಮನೆಯಲ್ಲಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ತಯಾರಿಸುವ ರೇಷ್ಮೆಗೆ ರೆಡಿ ಡಿಮ್ಯಾಂಡ್ ಇರಬೇಕು. ಈಗ ಟಿ. ನರಸೀಪುರದಲ್ಲಿರುವ ಬೇಸಿನ್‌ಗಳನ್ನು ರಿಪೈರ್ ಮಾಡಿದ್ದೇವೆ. ಇನ್ನೂ ಕೆಲವನ್ನು ರಿಪೈರ್ ಮಾಡ ಬೇಕೆಂಬ ಆಸೆಯಿದೆ. ಮಾರ್ಕೆಟ್ ಕಂಡೀಷನ್ಸ್‌ಗಳು ಅನುಕೂಲವಾದ ಹಾಗೆ ಇವುಗಳನ್ನು ರಿಪೈರ್ ಮಾಡುತ್ತಾ ಹೋಗುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆ ಮುಚ್ಚಲಾಗಿದ್ದ ಫಿಲೇಚರ್ ಕಂಪೆನಿಗಳನ್ನು ಈಗ ಎಷ್ಟು ತೆರೆಯಲಾಗಿದೆ ಮತ್ತು ಕೆಲಸ ಮಾಡುತ್ತಿವೆ?

ಶ್ರೀ ಎಚ್. ಸಿದ್ದವೀರಪ್ಪ.—ಈಗ 400 ಬೇಸಿನ್‌ಗಳು ಕೆಲಸ ಮಾಡುತ್ತಿವೆ.

Grant of building sites to Depressed Class people in Pavagada Taluk.

Q.—177. Sri C. T. HANUMANTHAIYA (Pavagada-Scheduled Castes).—

Will the Government be pleased to state :—

(*a*) the number of villages and the number of applications received from

*Asterisk indicates that the remarks or speeches have not been revised by the Member concerned.